ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು
ನರಸಿಂಹರಾಜ ಚೌಕ, ಬೆಂಗಳೂರು-560002

ಸಂ:ಅ/ಪಿಆರ್/ /2016-17 ದಿನಾಂಕ: 19/10/16

PSR(4) ತ660/16-17

ಅಂತರಿಕ ಕಛೇರಿ ಟಿಪ್ಪಣಿ

ವಿಷಯ:-ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಸರ್ಕಾರದ ಆದೇಶದಂತೆ ಕಾಮಗಾರಿಗಳನ್ನು ಮೇ//ಕೆಆರ್ಐಡಿಎಲ್ ಮುಖಾಂತರ ನಿರ್ವಹಿಸುವ ಬಗ್ಗೆ.

ಉಲ್ಲೇಖ:-1.ಪತ್ರ ಸಂ.ಅ/ಪಿಆರ್/1349/2015-16 ದಿ.09.07.2016
2.ಸರ್ಕಾರದ ಆದೇಶ ಸಂಖ್ಯೆ/ಆಇ751 ವೆಚ್ಚ-12/16 ದಿ.07.09.2016
3.ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಕರ್ನಾಟಕ ಸರ್ಕಾರ ಇವರ ಆದೇಶ ಸಂ.ನಆಇ/497/ಎಮ್ಎನ್ವೈ/2016/(ಭಾಗ-1) ದಿ.26.09.2016

****

ಮೇಲ್ಕಂಡ ಉಲ್ಲೇಖ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರೂರಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್ಮೆಂಟ್ ಲಿಮಿಟೆಡ್ (ಕೆಆರ್ಐಡಿಎಲ್ ಹಿಂದಿನ ಕೆಎಲ್ಎಸಿ) ನೇರವಾಗಿ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳ ಕಾಮಗಾರಿಗಳನ್ನು ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿ ಸರ್ಕಾರವು ಉಲ್ಲೇಖ-2ರನ್ವಯ ಅಧಿಸೂಚನೆ ಜಾರಿ ಮಾಡಿರುತ್ತದೆ. ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ವಿಕಾಸ ಸೌಧ ಬೆಂಗಳೂರು ರವರು ಉಲ್ಲೇಖ ಪತ್ರ (3) ರಲ್ಲಿ ಬೃಹತ್ ಮಹಾನಗರ ಪಾಲಿಕೆಯ ವತಿಯಿಂದ ಕರ್ನಾಟಕ ಸರ್ಕಾರದ ಅನುದಾನಗಳು, 110 ಹಳ್ಳಿಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನ, ಪಾಲಿಕೆಯ ಆಯವ್ಯಯದಲ್ಲಿ ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನ, ಪೂಜ್ಯ ಮಹಾಪೌರರು ಹಾಗೂ ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮೀಸಲು ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಮೇ//ಕೆಆರ್ಐಡಿಎಲ್ ಮುಖಾಂತರ ನಿರ್ವಹಿಸಲು ಆದೇಶಿಸಿರುತ್ತಾರೆ.

ಆದುದರಿಂದ ಮೇಲೆ ತಿಳಿಸಿರುವ ಕಾಮಗಾರಿಗಳನ್ನು ಮೇ//ಕೆಆರ್ಐಡಿಎಲ್ ಮುಖಾಂತರ ನಿರ್ವಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ..

19/10/16
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು
1144
26/10/16

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2.ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ..
3.ವಿಶೇಷ ಆಯುಕ್ತರು (ಯೋಜನೆ/ಹಣಕಾಸು/ಘ.ತ್ಯಾ.ನಿ/ಕಲ್ಯಾಣ) ರವರ ಮಾಹಿತಿಗಾಗಿ ಸಲ್ಲಿಸಿದೆ.

ಪು.ತಿ.ನೊ

4.ಪ್ರಧಾನ ಅಭಿಯಂತರರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

5.ಅಪರ/ಜಂಟಿ ಆಯುಕ್ತರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ರಾಜರಾಜೇಶ್ವರಿ ನಗರ,ಮಹದೇವಪುರ, ದಾಸರಹಳ್ಳಿ, ಯಲಹಂಕ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

6.ಮಾನ್ಯ ಮುಖ್ಯ ಅಭಿಯಂತರರು ((ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ರಾಜರಾಜೇಶ್ವರಿ ನಗರ ಮಹದೇವಪುರ, ದಾಸರಹಳ್ಳಿ, ಯಲಹಂಕ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

7.ಮುಖ್ಯ ಲೆಕ್ಕಾಧಿಕಾರಿಯವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

8.ಮುಖ್ಯ ಆರ್ಥಿಕಾಧಿಕಾರಿಯವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

9.ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ), ದಾಸಪ್ಪ ಆಸ್ಪತ್ರೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

10.ಎಲ್ಲಾ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 497 ಎಂಎನ್‌ವೈ 2016 (ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 26-09-2016.

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ,

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೆ,

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಸರ್ಕಾರದ ಅನುದಾನಗಳು, 110 ಹಳ್ಳಿಗಳ ಅಭಿವೃದ್ಧಿಗಳ ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಮುಖಾಂತರ ನಿರ್ವಹಿಸಲು ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಅ/ಪಿಆರ್/2349/2015-16, ದಿನಾಂಕ:01-07-2016.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಸರ್ಕಾರದ ಅನುದಾನಗಳು, 110 ಹಳ್ಳಿಗಳ ಅಭಿವೃದ್ಧಿಗಳ ಕಾಮಗಾರಿಗಳನ್ನು (ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016 ರಲ್ಲಿ ಅನುಮೋದನೆ ನೀಡಿರುವ ಕ್ರಿಯಾ ಯೋಜನೆಗಳ ಕಾವಗಾರಿಗಳನ್ನು ಹೊರತು ಪಡಿಸಿ) ಮೆ॥ ಕೆ.ಆರ್.ಐ.ಡಿ.ಎಲ್. ಮುಖಾಂತರ ನಿರ್ವಹಿಸಲು ಕೋರಿರುವುದಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ದಿನಾಂಕ: 07-09-2016 ರಂದು ಹೊರಡಿಸಿರುವ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಆಗತ್ಯ ಕ್ರಮಕಾಗಿ ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ಹೊರಡಿಸಿದೆ
ದಿನಾಂಕ: 26.9.16

ತಮ್ಮ ನಂಬುಗೆಯ,

(ಎನ್ ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.).

238/SFC/2016
268/SFC/2016

ಸಂಖ್ಯೆ:ಆಇ 751 ಬೆಬ್ಬ-12/16

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:07.09.2016

ಅಧಿಸೂಚನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕರ್ನಾಟಕ ಸರ್ಕಾರದ ಅನುದಾನಗಳು, 110 ಹಳ್ಳಿಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಸರ್ಕಾರದ ಅನುದಾನ, ಪಾಲಿಕೆಯ ಆಯವ್ಯಯದಲ್ಲಿ ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನ, ಪೂಜ್ಯ ಮಹಾಪೌರರು ಹಾಗೂ ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮೀಸಲು ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಗರಿಷ್ಠ ರೂ.2.00 ಕೋಟಿಗಳ ಮಿತಿಯೊಳಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ 2016-17ನೇ ಸಾಲಿಗೆ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ನಗರಾಭಿವೃದ್ಧಿ ಇಲಾಖೆಗ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಷರತ್ತುಗಳು:

1) ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಮೇಲಿನ ಕಾಮಗಾರಿಗಳನ್ನು ತನ್ನದೇ ಆಂತರಿಕ ಸಂಪನ್ಮೂಲಗಳಿಂದ ಕಾರ್ಯಗತಗೊಳಿಸತಕ್ಕದ್ದು. ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ, ಕೆ.ಟಿ.ಪಿ.ಪಿ ಕಾಯ್ದೆ ಮತ್ತು ಅಧಿನಿಯಮಗಳು, ಇ-ಸಂಗ್ರಹಣಾ ವೇದಿಕೆಯ ಮೂಲಕ ಕೈಗೊಳ್ಳಬೇಕು.
2) ಯಾವುದೇ ಕಾಮಗಾರಿಗಳನ್ನು Split ಮಾಡಿ KRIDLಗೆ ವಹಿಸಬಾರದು.
3) ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ನಗರಾಭಿವೃದ್ಧಿ ಇಲಾಖೆಯು ಧೃಡಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ನಂದಕುಮಾರ್)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ
(ಲೋಕೋಪಯೋಗಿ ಆರ್ಥಿಕ ಕೋಶ)

ಇವರಿಗೆ:

ಜಂಟಿ ನಿರ್ದೇಶಕರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಆರ್.ವಿ.ಕಾಲೇಜು ಅಂಚೆ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-59, ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ 25 ಮುದ್ರಿತ ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.

ಪ್ರತಿ:

1. ಮಹಾಲೇಖಪಾಲರು (ಲೆಕ್ಕ ಮತ್ತು ಪರಿಶೋಧನೆ), ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
3. ನಿರ್ದೇಶಕರು, ಕರ್ನಾಟಕ ರಾಜ್ಯ ಸರ್ಕಾರಗಳ ಇಲಾಖೆ, ವಿಕಾಸಸೌಧ, ಬೆಂಗಳೂರು-ಒಟ್ಟು 10 ಪ್ರತಿಗಳು.

ಕರ್ನಾಟಕ ಸರ್ಕಾರದ ಪತ್ರಿಕಾಂಶ

ವಿಧಾನ ಸೌಧ

ಬೆಂಗಳೂರು, ದಿನಾಂಕ:07.09.2016

ಆದ್ಯತೆಯ

ಬೃಹತ್ ಬೆಂಗಳೂರು ಮಹಾನಗರದ ಜಲಾಶಯಗಳ ಪಕ್ಕದಿಂದ ಹಾದುಹೋಗುವ ಎಲ್ಲಾ ರಾಜಕಾಲುವೆಗಳು, 110 ಹಳ್ಳಿಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಸರ್ಕಾರದ ಅನುದಾನ, ಖಾಲಿಯಿರುವ ಅಧಿಕಾರಿಗಳ ಹುದ್ದೆಗಳು ಹಾಗೂ ಕಾಲಕಾಲಕ್ಕೆ ಮೀಸಲಿಟ್ಟಿರುವ ಅನುದಾನ, ಕೂಡ್ಲು ಮುಖ್ಯರಸ್ತೆಯಲ್ಲಿ ರಾಜಕಾಲುವೆಯಲ್ಲಿ ಅಳವಡಿಸಿರುವ ಕಾಮಗಾರಿಗಳು, ತಲಘಟ್ಟಪುರ ಕೆರೆಯ ಕೋಡಿಯಿಂದ ಕೆಳಗಿರುವ ಕಾಮಗಾರಿಗಳನ್ನು ಮತ್ತು ರೂ.2.00 ಕೋಟಿಗಳ ಮಿತಿಯೊಳಗೆ ಈ ಕಳೆದ ಪಟ್ಟಿಗಳಲ್ಲಿರುವ, ಕೆ.ಆರ್.ಪುರಂ ಸಂಸ್ಥೆಯ ವ್ಯಾಪ್ತಿಯಲ್ಲಿ 2016-17ನೇ ಸಾಲಿಗೆ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳಿಗೆ ಪಾಲಿಕೆಯ ಸಾಮಾನ್ಯ ಸಭೆಯ ಅನುಮೋದನೆಯನ್ನು ಪಡೆಯುವುದಕ್ಕೆ ಅಧಿನಿಯಮ-1976ರ ಪ್ರಕರಣ 4(ಜ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ತಗಲಬಹುದಾದ ವೆಚ್ಚಕ್ಕೆ ಈ ಮೂಲಕ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಷರತ್ತುಗಳು:

1) ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಮೇಲಿನ ಕಾಮಗಾರಿಗಳನ್ನು ಪ್ರಸ್ತುತ ಖಾಲಿಯಿರುವ ಸಹಾಯಕ ಆಯುಕ್ತರುಗಳಿಗೆ ವಹಿಸಿಕೊಡಬೇಕು. ಯೋಜನೆಯ ಮುಖ್ಯಾಂಶ ಕೈಗೊಳ್ಳುವಾಗಲಿ, ಆ ಸಮಯದಲ್ಲಿ ಅಧಿಸೂಚನೆಯಾಗಿರುವ ಅಧಿಕಾರಿಗಳ ಹೆಸರಿಗೆ ಮಾಡಿಸಿಕೊಳ್ಳುವುದು.

2) ಯಾವುದೇ ಕಾಮಗಾರಿಗಳನ್ನು Split ಮಾಡಿ KRIDLಗೆ ನೀಡತಕ್ಕದ್ದಲ್ಲ.

3) ಕಳಪೆ ಗುಣಮಟ್ಟದ ಕಾಮಗಾರಿಗಳನ್ನು ಸಮರ್ಪಕ ರೀತಿಯಲ್ಲಿ ಪೂರ್ಣಗೊಳಿಸಲು ಗುತ್ತಿಗೆದಾರರಿಂದ ಖಾತರಿ ಪಡೆದುಕೊಳ್ಳತಕ್ಕದ್ದು.

ಸಂಖ್ಯೆ: ಆಇ 476 ಬೆಚ್ಚ-12/16

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ: 18.07.2016

ಅಧಿಸೂಚನೆ

ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಈ ಕೆಳಕಂಡ ಕಾಮಗಾರಿಗಳನ್ನು ನೇರವಾಗಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್ ಹಿಂದಿನ ಕೆಎಲ್‌ಡಿಸಿ) ಸಂಸ್ಥೆಯ ಮೂಲಕ ಗರಿಷ್ಠ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ:01.04.2016 ರಿಂದ ಒಂದು ವರ್ಷದ ಅವಧಿಗೆ ಈ ಕೆಳಕಂಡ ಪರಿತ್ಯಗೊಳಪಟ್ಟು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

1. ಎಲ್ಲಾ ತರಹದ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ, ಲೇಔಟ್ ನಿರ್ಮಾಣ, ಸಂಬಂಧಿಸಿದ ಎಲ್ಲಾ ಎಲೆಕ್ಟ್ರಿಕಲ್ ಕಾಮಗಾರಿಗಳ ನಿರ್ಮಾಣ, ರಸ್ತೆ ದೀಪಗಳ ನಿರ್ವಹಣೆ.
2. ಮೂಲಭೂತ ಸೌಕರ್ಯದ ಕಾಮಗಾರಿಗಳು ಮತ್ತು ರಸ್ತೆ ನಿರ್ಮಾಣ ಹಾಗೂ ನಿರ್ವಹಣೆ.
3. ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಕಾಮಗಾರಿಗಳು.

ಷರತ್ತುಗಳು:

1) ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಮೇಲಿನ ಕಾಮಗಾರಿಗಳನ್ನು ತನ್ನದೇ ಆಂತರಿಕ ಸಂಪನ್ಮೂಲಗಳಿಂದ ಕಾರ್ಯಗತಗೊಳಿಸತಕ್ಕದ್ದು. ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ, ಕೆ.ಟಿ.ಪಿ.ಪಿ ಕಾಯ್ದೆ ಮತ್ತು ಅಧಿನಿಯಮಗಳು, ಇ-ಸಂಗ್ರಹಣಾ ವೇದಿಕೆಯ ಮೂಲಕ ಕೈಗೊಳ್ಳಬೇಕು.
2) ಈ ಅಧಿಸೂಚನೆಯ ಅವಧಿಯು ಮುಕ್ತಾಯಗೊಳ್ಳುವುದರೊಳಗಾಗಿ, KHB ಮಾದರಿಯಲ್ಲಿಯೇ KRIDL ಸಂಸ್ಥೆಯು ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳಿಗನ್ವಯವೇ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು.
3) ಸರ್ಕಾರದ ಇಲಾಖೆಗಳು/ನಿಗಮಗಳು/ಮಂಡಳಿಗಳು ಯಾವುದೇ ಕಾಮಗಾರಿಗಳನ್ನು Split ಮಾಡಿ KRIDLಗೆ ವಹಿಸಬಾರದು.
4) ಉತ್ತಮ ಗುಣಮಟ್ಟದ ಕಾಮಗಾರಿ/ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಂಬಂಧಪಟ್ಟ ಇಲಾಖೆಗಳು ಖಚಿತಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ನಂದಕುಮಾರ್)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ
(ಲೋಕೋಪಯೋಗಿ ಆರ್ಥಿಕ ಸಲಹೆಗಾರರು)

ಶಾಸಕರು
ಯಲಹಂಕ ವಿಧಾನಸಭಾ ಕ್ಷೇತ್ರ, ಬೆಂಗಳೂರು ನಗರ ಜಿಲ್ಲೆ

ಶಾಸಕರ ಭವನ-2, ಕೊಠಡಿ ಸಂಖ್ಯೆ : 37-38,
ಬೆಂಗಳೂರು - 560 001, ಮೊ : 98450 17811
ಇ-ಮೇಲ್ : srvishwanathmla@gmail.com
ನಿವಾಸ : ನಂ. 14/1, ಏಂಗನಾಯಕನಹಳ್ಳಿ, ಯಲಹಂಕ ಹೋಬಳಿ,
ಬೆಂಗಳೂರು (ಉತ್ತರ) - 560 064. ✆ : 080-28468272

SRV/MLA.Y/3555/16

Date:07/12/2016

ಮಾನ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ಮಾನ್ಯರೆ,

ವಿಷಯ: 2015-16ನೇ ಸಾಲಿನ 7 ಸಿ.ಎಂ.ಸಿ ಮತ್ತು 1 ಟಿ.ಎಂ.ಸಿ ಪ್ರದೇಶಗಳನ್ನು ಸಮಗ್ರ ಅಭಿವೃದ್ದಿ ಅನುದಾನದಲ್ಲಿ ಯಲಹಂಕ ವಿಧಾನಸಭಾಕ್ಷೇತ್ರಕ್ಕೆ ಮೀಸಲಿಟ್ಟಿರುವ 15.00 ಕೋಟಿ ಕಾಮಗಾರಿಗಳನ್ನು ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ "ತುರ್ತಾಗಿ" ನಿರ್ವಹಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ನ.ಇ/279/ಎಸ್.ಎಫ್.ಸಿ/2015.ಬೆಂಗಳೂರು ದಿನಾಂಕ: 08/01/2016.
2) ಆಯುಕ್ತರು ಬಿಬಿಎಂಪಿ ರವರ ಆಂತರಿ ಕಛೇರಿ ಟಿಪ್ಪಣಿ ಸಂಖ್ಯೆ: ಪಿ.ಎಸ್.ಆರ್ (4) 7660/2016-17, ದಿನಾಂಕ: 19/10/2016

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ 2015-16ನೇ ಸಾಲಿನ ಕರ್ನಾಟಕ ಸರ್ಕಾರದ ಬಜೆಟ್ ಘೋಷಣೆನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹಿಂದಿನ 7 ಸಿ.ಎಂ.ಸಿ ಹಾಗೂ 1ಟಿ.ಎಂ.ಸಿ ಪ್ರದೇಶಗಳನ್ನು ಸಮಗ್ರವಾಗಿ ಅಭಿವೃದ್ದಿ ಪಡಿಸಲು ಒದಗಿಸಿರುವ ರೂ 250.00 ಕೋಟಿ ಅನುದಾನದಲ್ಲಿ ಯಲಹಂಕ ವಿಧಾನಸಭಾಕ್ಷೇತ್ರಕ್ಕೆ ಮೀಸಲಿಟ್ಟಿರುವ ರೂ 15.00 ಕೋಟಿ ಅನುದಾನದ ಕಾಮಗಾರಿಗಳ ಕ್ರಿಯಾಯೋಜನೆಗೆ ಈಗಾಗಲೇ ಸರ್ಕಾರದ ಅಧೀನ ಕಾರ್ಯದರ್ಶಿಗಳು ನಗರಾಭಿವೃದ್ದಿ ಇಲಾಖೆ ರವರು ಅನುಮೋದನೆ ನೀಡಿರುತ್ತಾರೆ.

ಆದರೆ ಯಲಹಂಕ ವಿಧಾನಸಭಾಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ: 01 ರಿಂದ 4 ರ ಅಧೀನದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಹಲವಾರು ರಸ್ತೆಗಳನ್ನು ಅಗೆದು ರಸ್ತೆಗಳು ಹಾಳಾಗಿರುತ್ತವೆ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ತುಂಬಾ ತೊಂದರೆಯಾಗುತ್ತಿರುವುದರಿಂದ ರಸ್ತೆ ಅಪಘಾತಗಳು ಸಹ ಸಂಭವಿಸುತ್ತಿರುವುದರಿಂದ 2015-16ನೇ ಸಾಲಿನ ಬಜೆಟ್ ಘೋಷಣೆನ್ವಯ ಯಲಹಂಕ ವಿಧಾನಸಭಾಕ್ಷೇತ್ರಕ್ಕೆ ಮೀಸಲಿಟ್ಟಿರುವ ರೂ 15.00 ಕೋಟಿ ಅನುದಾನದ ಕಾಮಗಾರಿಗಳನ್ನು "ತುರ್ತಾಗಿ" ಕೈಗೊಳ್ಳಲು ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಈ ಮೂಲಕ ತಮ್ಮಲ್ಲಿ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

[ಎಸ್.ಆರ್.ವಿಶ್ವನಾಥ್]

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 09.01.2017ರಂದು ನಡೆದ ಸಭೆಯ ನಡವಳಿಗಳು

ವಿಷಯದ ಸಂಖ್ಯೆಃ ತೆಆಸ್ಥಾಸ/104/2016-17

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-12-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರವು 2015-16ನೇ ಸಾಲಿಗೆ ಬಿಬಿಎಂಪಿಗೆ ಘೋಷಿಸಿರುವಂತೆ ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಆಈಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ 08-1-2016 ರಲ್ಲಿ ರೂ. 250.00 ಕೋಟಿಗಳ ವಿಶೇಷ ಅನುದಾನದಡಿ 9 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಮಗಾರಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಸರ್ಕಾರದ ಅನುಮೋದನೆಯಂತೆ ರೂ. 250.00 ಕೋಟಿಗಳಲ್ಲಿ ಕೆ.ಆರ್.ಪುರಂ, ಯಶವಂತಪುರ, ರಾಜರಾಜೇಶ್ವರಿನಗರ, ಬ್ಯಾಟರಾಯನಪುರ ಕ್ಷೇತ್ರಗಳ ಕ್ರಿಯಾ ಯೋಜನೆಗೆ 2015-16 ನೇ ಸಾಲಿನಲ್ಲಿ ರೂ. 175.00 ಕೊಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ನಆಈ 73 ಎಸ್‌ಎಫ್‌ಸಿ 2016, ಬೆಂಗಳೂರು, ದಿನಾಂಕ 20-9-2016 ರಲ್ಲಿ ಮೇಲ್ಕಂಡಂತೆ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಒದಗಿಸಿರುವ ರೂ. 15.00 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಕಾಮಗಾರಿ ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ. ಮುಖ್ಯ ಅಭಿಯಂತರರು (ಯಲಹಂಕ) ರವರು 30 ಕಾಮಗಾರಿಗಳ ಅಂದಾಜು ಮೊತ್ತ ರೂ. 15.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ.

2016-17ರ ಆಯವ್ಯಯದ ಸರ್ಕಾರದ ಅನುದಾನದ ಲೆಕ್ಕಶೀರ್ಷಿಕೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಪಿ-3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸಿರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್.ಎಫ್.ಸಿ/2016 ಬೆಂಗಳೂರು ದಿನಾಂಕ: 21-06-2016 ರ ಆದೇಶದಲ್ಲಿ ನಗರೋತ್ಥಾನ ಮತ್ತು ವಿಶೇಷ ಮೂಲಭೂತ ಸೌಕರ್ಯ, ಕೆರೆಗಳು ಮೊತ್ತ ರೂ. 7300-00 ಕೋಟಿಗಳ ಕ್ರಿಯಾ ಯೋಜನೆ Annexure-I to Annexure-18 ರ ವರೆಗೆ ಅನುಮೋದನೆ ನೀಡಿದೆ. Annexure-II ರಲ್ಲಿ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಆಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ: 08-1-2016 ರಲ್ಲಿ ಅನುಮೋದಿಸಿರುವಂತೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ರೂ. 250.00 ಕೋಟಿಗಳ ಅನುದಾನ ಒದಗಿಸಿದೆ. 2016-17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸದೇ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. 2016-17ರ ಲೆಕ್ಕಶೀರ್ಷಿಕೆ ಪಿ-3089 ರ ಚಾಲ್ತಿ ಕಾಮಗಾರಿಗಳು ಅಡಿ ರೂ. 15.00 ಕೋಟಿಗಳ ಅನುದಾನ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ:- ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-12-2016ರ ಟಿಪ್ಪಣಿಯಂತೆ ಸಮಿತಿಯು ಶಿಫಾರಸ್ಸು ಮಾಡಿದೆ.

ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಕ್ರಮ ಸಂಖ್ಯೆ	ಶ್ರೀಯುತರುಗಳ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
01	ಎಂ.ಕೆ.ಗುಣಶೇಕರ್	ಅಧ್ಯಕ್ಷರು	
02	ಬಿ.ಎನ್.ನಿತೀಶ್ ಪುರುಶೋತ್ತಮ	ಸದಸ್ಯರು	B.N.
03	ಕೆ.ಎಂ.ಮಮತ	ಸದಸ್ಯರು	
04	ಜೆ.ಎನ್.ಶ್ರೀನಿವಾಸಮೂರ್ತಿ	ಸದಸ್ಯರು	
05	ಎಂ.ಮಹದೇವ	ಸದಸ್ಯರು	
06	ಪದ್ಮಾವತಿ ನರಸಿಂಹಮೂರ್ತಿ	ಸದಸ್ಯರು	Padmavathi.G
07	ಮಮತ ಕೆ.ಬಿ. ವಾಸುದೇವ	ಸದಸ್ಯರು	Mamatha K.B
08	ಎಂ.ಪದ್ಮಾವತಿ ಶ್ರೀನಿವಾಸ್	ಸದಸ್ಯರು	
09	ಎನ್.ಲೋಕೇಶ್	ಸದಸ್ಯರು	
10	ಎಂ.ಶಶಿರೇಖಾ	ಸದಸ್ಯರು	Shashi Rekha
11	ಬಿ.ಸುಮಂಗಲ	ಸದಸ್ಯರು	B.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

*****

ಸರ್ಕಾರವು 2015–16ನೇ ಸಾಲಿಗೆ ಬಿಬಿಎಂಪಿಗೆ ಘೋಷಿಸಿರುವಂತೆ ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಆಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ 08–1–2016 ರಲ್ಲಿ ರೂ. 250.00 ಕೋಟಿಗಳ ವಿಶೇಷ ಅನುದಾನದಡಿ 9 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಮಗಾರಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಸರ್ಕಾರದ ಅನುಮೋದನೆಯಂತೆ ರೂ. 250.00 ಕೋಟಿಗಳಲ್ಲಿ ಕೆ.ಆರ್.ಪುರಂ, ಯಶವಂತಪುರ, ರಾಜರಾಜೇಶ್ವರಿನಗರ, ಬ್ಯಾಟರಾಯನಪುರ ಕ್ಷೇತ್ರಗಳ ಕ್ರಿಯಾ ಯೋಜನೆಗೆ 2015–16 ನೇ ಸಾಲಿನಲ್ಲಿ ರೂ. 175.00 ಕೊಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ನಈ 73 ಎಸ್‌ಎಫ್‌ಸಿ 2016, ಬೆಂಗಳೂರು, ದಿನಾಂಕ 20–9–2016 ರಲ್ಲಿ ಮೇಲ್ಕಂಡಂತೆ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಒದಗಿಸಿರುವ ರೂ. 15.00 ಕೋಟಿಗಳ ಕ್ರಿಯಾ - ಯೋಜನೆಗೆ ಅನುಮೋದನೆ ನೀಡಿ ಕಾಮಗಾರಿ ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ. ಮುಖ್ಯ ಅಭಿಯಂತರರು (ಯಲಹಂಕ) ರವರು 30 ಕಾಮಗಾರಿಗಳ ಅಂದಾಜು ಮೊತ್ತ ರೂ. 15.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ.

2016–17ರ ಆಯವ್ಯಯದ ಸರ್ಕಾರದ ಅನುದಾನದ ಲೆಕ್ಕಶೀರ್ಷಿಕೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಪಿ–3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸಿರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್.ಎಫ್.ಸಿ/2016 ಬೆಂಗಳೂರು ದಿನಾಂಕ: 21–06–2016 ರ ಆದೇಶದಲ್ಲಿ ನಗರೋತ್ತಾನ ಮತ್ತು ವಿಶೇಷ ಮೂಲಭೂತ ಸೌಕರ್ಯ, ಕೆರೆಗಳು ಮೊತ್ತ ರೂ. 7300–00 ಕೋಟಿಗಳ ಕ್ರಿಯಾ ಯೋಜನೆ Annexure-1 to Annexure-18 ರ ವರೆಗೆ ಅನುಮೋದನೆ ನೀಡಿದೆ. Annexure-11 ರಲ್ಲಿ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಆಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ:08–1–2016 ರಲ್ಲಿ ಅನುಮೋದಿಸಿರುವಂತೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ರೂ. 250.00 ಕೋಟಿಗಳ ಅನುದಾನ ಒದಗಿಸಿದೆ. 2016–17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸದೇ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. 2016–17ರ ಲೆಕ್ಕಶೀರ್ಷಿಕೆ ಪಿ–3089 ರ ಚಾಲ್ತಿ ಕಾಮಗಾರಿಗಳು ಅಡಿ ರೂ. 15.00 ಕೋಟಿಗಳ ಅನುದಾನ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ